ದಿನಾಂಕ 03-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಆರ್.ವಿ.ಡಬ್ಲ್ಯೂ ವಕೀಲರಿಂದಃ**

1. ನಾನು ಬಿ.ಎ ಪದವೀಧರ. ಈ ದಾವೆಯನ್ನು ವಿರೂಪಾಕ್ಷಪ್ಪ ರವರು ದಾಖಲಿಸಿದ್ದಾರೆ. ಆಸ್ತಿಯು ತನ್ನ ಜಾಗವೆಂದ ದಾವೆಯನ್ನು ಸಲ್ಲಿಸಿದ್ದಾರೆ. ದಾವಾ ಆಸ್ತಿಗಳು ಪ್ರತಿವಾದಿಗಳ ಆಸ್ತಿಯಾಗಿದ್ದು, ವಾದಿಯ ಆಸ್ತಿ ಆಗಿರುವುದಿಲ್ಲ. ಕುರುವತ್ತೆಪ್ಪ ಎಂಬುವವರಿಂದ ನಾನು 4 ಗುಂಟೆ ಆಸ್ತಿ ಖರೀದಿ ಮಾಡಿರುತ್ತೇನೆ. ಈ ದಾವೆಯನ್ನು ವಾದಿಯು 14 ಗುಂಟೆ ಜಾಗಕ್ಕೆ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು ಖರೀದಿಸಿದ 4 ಗುಂಟೆ ಆಸ್ತಿ ದಾವಾ ಶೆಡ್ಯೂಲ್ ಎ ಆಸ್ತಿಯಾದ 14 ಗುಂಟೆ ಜಮೀನಿನಲ್ಲಿ ಇರುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಆದರೆ ಸ ನಂಃ 175 ರ ಜಮೀನಿನಲ್ಲಿ ನಾನು ಖರೀದಿಸಿದ 4 ಗುಂಟೆ ಆಸ್ತಿ ಇರುತ್ತದೆ.

2. ಹೊಂಕಣ ಗ್ರಾಮದ ಸ ನಂಃ 175 ಮೂಲತಃ ಕುರುವತ್ತೆಪ್ಪ ರವರಿಗೆ ಸೇರಿದ ಜಮೀನಾಗಿತ್ತು. ಈ ದಾವೆಯನ್ನು ವಾದಿಯು ಎಷ್ಟು ಅಳತೆಯ ಜಾಗಕ್ಕೆ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ಸಾಕ್ಷಿಯನ್ನು ನೀಡುವ ಪೂರ್ವದಲ್ಲಿ ವಾದಿಯು ಸಲ್ಲಿಸಿರುವ ವಾದ ಪತ್ರ ಮತ್ತು ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ 4 ಗುಂಟೆ ಜಾಗವನ್ನು ಮಾರಾಟ ಮಾಡಲು ಒಪ್ಪಿ ಕುರುವತ್ತೆಪ್ಪ ಅಂಬಿಗೇರ ರವರು ಸಂಚಕಾರ ಪತ್ರವನ್ನು ಬರೆದು ಕೊಟ್ಟಿದ್ದು ಸೂಕ್ತ ದಾಖಲೆಗಳು ಆದ ಮೇಲೆ ಖರೀದಿ ಪತ್ರವನ್ನು ಬರೆದು ಕೊಡುತ್ತೇನೆ ಎಂದು ಹೇಳಿದ್ದರು. ಖರೀದಿ ಸಂಚಕಾರ ಪತ್ರವನ್ನು ಬರೆದುಕೊಟ್ಟ ನಂತರ ನಾನು ಹಲವಾರು ಬಾರಿ ಕ್ರಯಪತ್ರವನ್ನು ಬರೆದುಕೊಡುವಂತೆ ಕೇಳಿದ್ದರೂ ಸೂಕ್ತ ದಾಖಲೆಗಳು ಆಗಿಲ್ಲವೆಂದು ಅವರು ಇನ್ನೂ ನನ್ನ ಪರವಾಗಿ ಖರೀದಿ ಪತ್ರವನ್ನು ಬರೆದು

ಕೊಟ್ಟಿರುವುದಿಲ್ಲ. ನಾನು ಮಾಡಿಕೊಂಡ 4 ಗುಂಟೆಗೆ ಸಂಬಂಧಿಸಿದ ಖರೀದಿ ಕರಾರು ಪತ್ರದ ದಾಖಲೆಗಳು ಇನ್ನೂ ಆಗಿರುವುದಿಲ್ಲ. ದಾವಾ ಶೆಡ್ಯೂಲ್ ಬಿ ಆಸ್ತಿಯು ದಾವಾ ಶೆಡ್ಯೂಲ್ ಎ ಆಸ್ತಿಯ ಭಾಗದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾನು ತಾತ್ಪೂರಿಕ ತಗಡಿನ ಶೆಡ್ಡನ್ನು ನಿರ್ಮಿಸಿದ್ದೇನೆ ಎಂದರೆ ಸರಿ. ಸದರಿ ಶೆಡ್ಡು ದಾವಾ ಶೆಡ್ಯೂಲ್ ಎ ಆಸ್ತಿಯ ಪರಿಮಿತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ.

3. ನನ್ನ ಪರವಾಗಿ 4 ಗುಂಟೆಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಗಿರುವ ಖರೀದಿ ಕರಾರು ಪತ್ರದ ಆಸ್ತಿಯ ಪೂ- ಹನುಮಂತಪ್ಪ ಹಂಸಭಾವಿ ರವರ ಆಸ್ತಿ, ಪ- ಮೂಲ ಮಾಲೀಕ ಕುರುವತ್ತೆಪ್ಪ ರವರಿಗೆ ಉಳಿದ ಜಾಗ, ಉ- ಸರಕಾರಿ ರಸ್ತೆ, ದ- ದಾವಲ್ ಸಾಬ್ ರವರ ಮನೆ ಇದೆ. ದಾವಾ ಶೆಡ್ಯೂಲ್ ಎ ಆಸ್ತಿಯಾದ 14 ಗುಂಟೆ ಜಮೀನಿನ ಪೂರ್ವಕ್ಕೆ ಸ ನಂಃ 176 ರ ಜಮೀನು ಇದೆ ಎಂದರೆ ಗೊತ್ತಿಲ್ಲ. ಪಶ್ಚಿಮಕ್ಕೆ - ಕುರುವತ್ತೆಪ್ಪ ಅಂಬಿಗೇರ ರವರ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ- ರಸ್ತೆ ಇದೆ ಎಂದರೆ ಸರಿ. ದಕ್ಷಿಣಕ್ಕೆ - ಸ ನಂಃ 174 ರ ಜಮೀನು ಇದೆ ಎಂದರೆ ಸಾಕ್ಷಿಯು ದಾವುಲ್ ಸಾಬ್ ರವರ ಮನೆ ಇದ ಎಂದು ನುಡಿಯುತ್ತಾರೆ.

4. ನಿ.ಡಿ-2 ರ ಖರೀದಿ ಕರಾರು ಪತ್ರದ ಆಧಾರದಲ್ಲಿ ಕುರುವತ್ತೆಪ್ಪ ಅಂಬಿಗೇರ ರವರ ವಿರುದ್ದ ಇದುವರೆಗೂ ದಾವೆ ಸಲ್ಲಿಸಿರುವುದಿಲ್ಲ. ನಿ.ಡಿ-2 ರ ಖರೀದಿ ಕರಾರು ಪತ್ರದ ಆಧಾರದ ಮೇಲೆ ನಾನು ಆಧರಿಸಿರುವ 4 ಗುಂಟೆಗೆ ಕಾನೂನುಬದ್ದ ಹಕ್ಕು ಮತ್ತು ಹಿತಾಸಕ್ತಿ ವರ್ಗಾವಣೆಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ-2 ರ ಖರೀದಿ ಕರಾರಿನ ಆಧಾರದ ಮೇಲೆ ನಾನು ಯಾವುದೇ ಕಾನೂನಿನ ಕ್ರಮವನ್ನು ತೆಗೆದುಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರಿಗೆ ಸಂಬಂಧಿಸಿದಂತೆ ನನ್ನ ಪರವಾಗಿ ಆಗಿರುವ 4 ಗುಂಟೆ ಜಮೀನಿಗೆ ಕರಾರಿನ ಷರತ್ತುಗಳನ್ನು ಪೂರೈಸುವಂತೆ ಕುರುವತ್ತೆಪ್ಪನ ವಿರುದ್ದ ನಾನು ಕಾನೂನು ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ.

5. ವಾದಿಯ ಪರವಾಗಿ ಕುರುವತ್ತೆಪ್ಪ ರವರು ಮಾಡಿಕೊಟ್ಟಿರುವ ಖರೀದಿ ಪತ್ರವು ಸುಳ್ಳು ಖರೀದಿ ಪತ್ರ ಆಗಿರುತ್ತದೆ. ಸದರಿ ಖರೀದಿ ಪತ್ರವನ್ನು ಪ್ರಶ್ನಿಸಿ ನಾನು ಯಾವುದೇ ದಾವೆಗಳನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದವರೆದು ಗ್ರಾಮದಲ್ಲಿ ಹಿರಿಯರನ್ನು ಕೂರಿಸಿ ಕೇಳಿದ್ದೆ ಎಂದು ನುಡಿಯುತ್ತಾರೆ. ವಾದಿಯ ಪರವಾಗಿ ದಾವಾ ಶೆಡ್ಯೂಲ್ ಎ ಆಸ್ತಿಗೆ ಸಂಬಂಧಿಸಿದಂತೆ ಕುರುವತ್ತೆಪ್ಪ ರವರು ನೋಂದಾಯಿತ ಖರೀದಿ ಪತ್ರವನ್ನು ಬರೆದುಕೊಟ್ಟ ನಂತರ ನಿ.ಡಿ-2 ರ ಸುಳ್ಳು ಖರೀದಿ ಕರಾರು ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ-2 ರ ಖರೀದಿ ಕರಾರು ಪತ್ರವು ಮೋಸದ ಕರಾರು ಪತ್ರ ಆಗಿರುವುದರಿಂದ ಅದರ ಜಾರಿಗಾಗಿ ಕುರುವತ್ತೆಪ್ಪ ರವರ ವಿರುದ್ದ ಇದುವರೆಗೂ ಯಾವುದೋ ಕಾನೂನು ಕ್ರಮತೆಗೆದುಕೊಂಡಿಲ್ಲ ಎಂದರೆ ಸಾಕ್ಷಿಯು ನಾನು ಖರೀದಿ ಮಾಡಬೇಕು ಅಂದುಕೊಂಡಿರುವ ಜಮೀನು ಸ ನಂಃ 175 ರ ಜಮೀನಿನಲ್ಲಿ ಇದ್ದು, ವಾದಿಯ 14 ಗುಂಟೆ ಜಮೀನು ಸ ನಂಃ 174 ಭಾಗದ ಜಮೀನಾಗಿರುತ್ತದೆ ಎಂದು ನುಡಿಯುತ್ತಾರೆ.

6. ವಾದಿಯ ಪರವಾಗಿ ವಿರೂಪಾಕ್ಷಪ್ಪ ಮಾರಾಟ ಮಾಡಿರುವ 14 ಗುಂಟೆ ಜಮೀನು 175/4 ರ ಭಾಗ ಎಂದರೆ ಸರಿ. ನಾನು 4 ಗುಂಟೆಗೆ ಸಂಬಂಧಿಸಿದಂತೆ ಮಾಡಿಕೊಂಡಿರುವ ನಿ.ಡಿ-2 ರ ಖರೀದಿ ಕರಾರು ಪತ್ರ ಸ ನಂಃ 175/4 ರ ಭಾಗ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಎ ಆಸ್ತಿಗೆ ಸಂಬಂಧಪಟ್ಟಂತೆ ಖರೀದಿ ಪತ್ರವನ್ನು ಬರೆದುಕೊಡುವ ಪೂರ್ವದಲ್ಲಿ ಪ್ರತ್ಯೇಕ 11-ಇ ಸ್ಕೆಚ್ ಆಗಿದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಎ ಆಸ್ತಿಯನ್ನು ಕುರುವತ್ತೆಪ್ಪ ರವರು ಕ್ರಯ ಪತ್ರದ ಅಡಿಯಲ್ಲಿ ವಾದಿಯ ಸಂಪೂರ್ಣ ಸ್ವಾಧೀನಕ್ಕೆ ನೀಡಿದ್ದರು ಎಂದರೆ ಸರಿಯಲ್ಲ.

7. ದಾವಾ ಶೆಡ್ಯೂಲ್ ಬಿ ಆಸ್ತಿಯಲ್ಲಿ ನಾನು ಅನಧಿಕೃತವಾಗಿ ವಾದಿಯ ಪರವಾಗಿ ಖರೀದಿ ಪತ್ರವನ್ನು ಕುರುವತ್ತೆಪ್ಪ ರವರು ಬರೆದುಕೊಟ್ಟ ನಂತರ ಅತಿಕ್ರಮಿಸಿ ಶೆಡ್ಡನ್ನು

ನಿರ್ಮಿಸಿರುತ್ತೇನೆ ಎಂದರೆ ಸಾಕ್ಷಿಯು 2011 ರಲ್ಲಿಯೇ ಶೆಡ್ಡನ್ನು ನಿರ್ಮಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಶೆಡ್ಡನ್ನು ನಿರ್ಮಿಸಲು ಸಂಬಂದಪಟ್ಟ ಪಂಚಾಯಿತಿ ಅಧಿಕಾರಿಗಳಿಂದ ಅಥವಾ ಕಂದಾಯ ಅಧಿಕಾರಿಗಳಿಂದ ಅನುಮತಿಯನ್ನು ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ಕುರುವತ್ತೆಪ್ಪ ರವರೇ ಸ್ವತಃ ಹಾಜರಾಗಿ ಅಳತೆ ಮಾಡಿಕೊಟ್ಟ ಸ್ಥಳದಲ್ಲಿ ಶೆಡ್ಡನ್ನು ನಿರ್ಮಿಸಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಯನ್ನು ಕುರಿತು ನನ್ನ ವಿರುದ್ದ ಸ್ಪರ್ದೆ ಮಾಡಲು ಆಸ್ತಿಯನ್ನು ಖರೀದಿ ಮಾಡಿದ್ದೀಯಾ ಎಂದು ಅತಿಕ್ರಮಿಸಿದ ಶೆಡ್ಡಿನ ಜಾಗವನ್ನು ನೀಡುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

8. ನನ್ನ ಕುಟುಂಬದಲ್ಲಿ ಹಲವರು ಒಳ್ಳೇಯ ಸಾರ್ವಜನಿಕ ಸ್ಥಾನದಲ್ಲಿದ್ದು ಹಾಗೂ ಪೊಲೀಸ್ ಇಲಾಖೆಯಲ್ಲಿದ್ದು, ಅವುಗಳ ದುರುಪಯೋಗಪಡಿಸಿಕೊಂಡು ವಾದಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಕುರುವತ್ತೆಪ್ಪ ರವರು 4 ಗುಂಟೆ ಜಮೀನನ್ನು ನನಗೆ ಮಾರಾಟ ಮಾಡಿರುವುದಿಲ್ಲ ಮತ್ತು ನಿ.ಡಿ-2 ರ ಖರೀದಿ ಕರಾರು ಪತ್ರವು ಕಾನೂನಿನ ಅಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರದಲ್ಲಿ ನಮೂದಿಸಿರುವಂತೆ ಒಟ್ಟು ರೂ.94000/- ಗಳಿಗೆ ಮಾರಾಟ ಮಾಡಲು ಒಪ್ಪಿಗೆ ಆದಂತೆ ತೋರಿಸಿದ್ದು, ಆದರೆ ಮುಂಗಡವಾಗಿ ಕೇವಲ ರೂ.25,000/- ಹಣವನ್ನು ನೀಡಿ ಸದರಿ ಮುಂಗಡ ಹಣದ ಮೆಲೆಯೇ 4 ಗುಂಟೆ ಆಸ್ತಿಯನ್ನು ಪಡೆಯಬೇಕೆಂಬ ದುರಾಸೆಯಿಂದ ವಾದಿಗೆ ಮತ್ತು ಕುರುವತ್ತೆಪ್ಪ ರವರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-2 ರ ಖರೀದಿ ಕರಾರು ಪತ್ರವು ನೈಜ ಕರಾರು ಪತ್ರ ಇಲ್ಲದೇ ಇರುವುದರಿಂದ 2012 ರಿಂದ ಇದುವರೆಗೂ ಯಾವುದೇ ಕಾನೂನು ಕ್ರಮವನ್ನು ಕುರುವತ್ತೆಪ್ಪನ ವಿರುದ್ದ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

9. ಖರೀದಿ ಕರಾರು ಪತ್ರದಲ್ಲಿ ಸ.ನಂಃ 175 ಎಂದು ನಮೂದು ಇದ್ದು, ಸ ನಂ 175/4 ಎಂದು ನಮೂದು ಇಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಪಡೆಯಲು ಸಾಧ್ಯವಿಲ್ಲ ಎಂದು ಅರಿತು ದುಟಾಯಿತನದಿಂದ ದಾವಾ ಶೆಡ್ಯೂಲ್ ಬಿ ಆಸ್ತಿಯನ್ನು ಅತಿಕ್ರಮಿಸಿ ಶೆಡ್ಡನ್ನು ನಿರ್ಮಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ವಿನಾ ಕಾರಣ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯಲ್ಲಿ ನಿ.ಪಿ-2 ರ ನೋಂದಾಯಿತ ಖರೀದಿ ಪತ್ರ ಆದ ನಂತರ ಅನಧಿಕೃತವಾಗಿ ಶೆಡ್ಡನ್ನು ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ

ಸಾಕ್ಷಿದಾರರ ಸಹಿ